**ದಿನಾಂಕಃ 10.08.2026 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀಸವಾಲು : ವಾದಿಯ ಪರ ವಕೀಲರಿಂದಃ**

5. ನನ್ನ ತಂದೆ-ತಾಯಿ ತೀರಿಕೊಂಡ ನಂತರ ನಾನು, ನನ್ನ ಅಣ್ಣ ಮತ್ತು ನನ್ನ ಅಕ್ಕ ಪಾಲುವಿಭಾಗ ಮಾಡಿಕೊಳ್ಳುವಾಗ ನನ್ನ ತಂದೆ-ತಾಯಿಗೆ 3 ಜನ ಮಕ್ಕಳು ಮಾತ್ರ ಇದ್ದೇವೆಂದು ತಿಳಿಸಿದ್ದೇನೆ ಎಂದರೆ ಇಲ್ಲ, 5 ಜನ ಮಕ್ಕಳಿದ್ದರು ಎಂದೇ ಹೇಳಿದ್ದೇನೆ. ನಿಡಿ 7 ರ ಜೊತೆ ಇರುವ ಪಾಲುವಿಭಾಗ ಪತ್ರವನ್ನು ತೋರಿಸಿ ಇದರಲ್ಲಿ 5 ಜನ ಮಕ್ಕಳಿದ್ದಾರೆಂದು ನಮೂದಿಸಿದ್ದೀರಾ? ಎಂದರೆ ನಮೂದಿಸಿಲ್ಲ. ನಿಡಿ 7 ಪಾಲುವಿಭಾಗ ಪತ್ರದ ಪ್ರಕಾರ ಸರ್ವೇ ನಂ 210 ಎ ಯಲ್ಲಿ 7 ಎಕರೆ 50 ಸೆಂಟ್ಸ್ ಸರ್ವೇ ನಂ. 210 ಬಿ ಯಲ್ಲಿ 7 ಎಕರೆ 50 ಸೆಂಟ್ಸ್ ಮತ್ತು ಸರ್ವೇ ನಂ. 209 ರಲ್ಲಿ 6 ಎಕರೆ 64 ಸೆಂಟ್ಸ್ ಜಮೀನನ್ನು ನಾವು ವಿಭಾಗ ಮಾಡಿಕೊಂಡಿದ್ದೇವೆ ಎಂದರೆ ಸರಿ. ಆ ಪ್ರಕಾರ ಸರ್ವೇ ನಂ. 210 ಬಿ ಯಲ್ಲಿ ನನಗೆ 2 ಎಕರೆ 75 ಸೆಂಟ್ಸ್ ಮತ್ತು 1 ನೇ ಪ್ರತಿವಾದಿಗೆ 4 ಎಕರೆ ಹಿಸ್ಸೆಯಾಗಿ ಬಂದಿತ್ತು ಎಂದರೆ ಸರಿ. ಸರ್ವೇ ನಂ. 210 ಎ ಯಲ್ಲಿ ಕೂಡಾ ನನ್ನ ಹಿಸ್ಸೆಗೆ 2 ಎಕರೆ 75 ಸೆಂಟ್ಸ್ ಮತ್ತು 1 ನೇ ಪ್ರತಿವಾದಿಯ ಹೆಸರಿಗೆ 4 ಎಕರೆ ಬಂದಿತ್ತು ಎಂದರೆ ಸರಿ. ಸರ್ವೇ ನಂ. 209 ರಲ್ಲಿ ಚನ್ನಬಸಮ್ಮನಿಗೆ 2 ಎಕರೆ 64 ಸೆಂಟ್ಸ್ ಮತ್ತು ನನಗೆ 4 ಎಕರೆ ಬಂದಿತ್ತು ಎಂದರೆ ಸರಿ. ನಾವು ಖಾತೆ ಬದಲಾವಣೆ ಮಾಡಿಕೊಳ್ಳುವಾಗ ನಮ್ಮ ತಂದೆ-ತಾಯಿಗೆ ಮೂವರೇ ಮಕ್ಕಳು ಎಂದು ಹೇಳಿದ್ದಲ್ಲಿ ಅದು ತಪ್ಪು ಹೇಳಿಕೆಯಾಗಿರುತ್ತದೆ ಎಂದರೆ ಸರಿ. ಈ ಮೂರು ಸರ್ವೇ ನಂಬರ್ ಗಳ ಒಟ್ಟು ವಿಸ್ತೀರ್ಣ 21 ಎಕರೆ 64 ಸೆಂಟ್ಸ್ ಇರುತ್ತದೆ ಎಂದರೆ ಸರಿ. ನಿಡಿ 6 ರಲ್ಲಿ ನಾವು ಕೊಟ್ಟ ಹೇಳಿಕೆ ಪ್ರಕಾರ ನಮ್ಮ ತಂದೆ-ತಾಯಿಗೆ ನಾನು, 1 ನೇ ಪ್ರತಿವಾದಿ ಮತ್ತು ಚನ್ನಬಸಮ್ಮ ಮಾತ್ರ ಮಕ್ಕಳು ಎಂದು ತಿಳಿಸಿರುವುದು ತಪ್ಪು ಎಂದರೆ ಸರಿ.

6. ಚನ್ನಬಸಮ್ಮ ತೀರಿಕೊಂಡ ನಂತರ ಆಕೆಯ ಹೆಸರಿನಲ್ಲಿದ್ದ ಐಟಂ ನಂ. 1(ಜಿ) ಆಸ್ತಿ ಆಕೆಯ ಮಗಳಾದ ಗೌರಮ್ಮನಿಗೆ ಬಂದಿತ್ತು ಎಂದರೆ ಸರಿ. ಮುಂದೆ 4 ನೇ ಪ್ರತಿವಾದಿ ಗೌರಮ್ಮ ಐಟಂ ನಂ. 1(ಜಿ)ಯನ್ನು ನನ್ನ ಹೆಂಡತಿಗೆ ಮಾರಾಟ ಮಾಡಿದರು ಎಂದರೆ ಸರಿ. ಐಟಂ ನಂ. 1(ಹೆಚ್) ಆಸ್ತಿಯನ್ನು ದಿನಾಂಕ 06.07.2022 ರಂದು ನಾನು ನನ್ನ ಮಗನಾದ 6 ನೇ ಪ್ರತಿವಾದಿಗೆ ದಾನ ಪತ್ರ ಮಾಡಿ ಕೊಟ್ಟಿದ್ದೇನೆ ಎಂದರೆ ಸರಿ. ನಾವು ಪಾಲುವಿಭಾಗ ಮಾಡಿಕೊಂಡಿದ್ದ ಬಗ್ಗೆ ನನ್ನ ಸಹೋದರಿ ವಾದಿಗೆ ಗೊತ್ತಿರಲಿಲ್ಲ ಎಂದರೆ ಎಲ್ಲರಿಗೂ ಗೊತ್ತಿತ್ತು. ಯಾವ ಕಾರಣಕ್ಕೆ ವಾದಿ ಲಲಿತಮ್ಮನಿಗೆ ದಾವಾ ಸ್ವತ್ತುಗಳಲ್ಲಿ ಹಿಸ್ಸೆ ಕೊಟ್ಟಿಲ್ಲ ಎಂದರೆ ನಮ್ಮ ತಾಯಿಯು ಅವರ ಎಲ್ಲಾ ಒಡವೆಗಳನ್ನು ವಾದಿಗೆ ಕೊಟ್ಟಿದ್ದರಿಂದ ಆಸ್ತಿಗಳಲ್ಲಿ ವಾದಿಗೆ ಹಿಸ್ಸೆ ಕೊಟ್ಟಿಲ್ಲ. ನಾನು 3 ನೇ ತರಗತಿವರೆಗೆ ಓದಿದ್ದೇನೆ. ನನಗೆ ಕನ್ನಡ ಓದಲು ಬರುತ್ತದೆ. ನನ್ನ ಪ್ರತಿವಾದ ಪತ್ರದಲ್ಲಿ ವಾದಿಗೆ ಬಂಗಾರದ ಒಡವೆಗಳನ್ನು ಕೊಟ್ಟಿದ್ದರಿಂದ ದಾವಾ ಸ್ವತ್ತುಗಳಲ್ಲಿ ಹಿಸ್ಸೆ ಕೊಟ್ಟಿಲ್ಲ ಎಂದು ಬರೆಯಿಸಿದ್ದೀನಾ? ಎಂದರೆ ಇಲ್ಲ. ನಮ್ಮ 5 ಜನ ಸ ಹೋದರ-ಸಹೋದರಿಯರು ಒಟ್ಟಾಗಿ ಕುಳಿತುಕೊಂಡು ಚರ್ಚಿಸಿಕೊಂಡು ಪಾಲುವಿಭಾಗ ಮಾಡಿ ಕೊಂಡಿದ್ದುಂಟೇ? ಎಂದರೆ ಇಲ್ಲ. ಸರ್ವೇ ನಂ. 210 ಎ 3 ನನ್ನ ಅಣ್ಣ 7 ನೇ ಪ್ರತಿವಾದಿಯ ಗಂಡನಿಗೆ ಮಾರಾಟ ಮಾಡಿದ್ದಾರೆ. ದಿನಾಂಕ 23.12.2002 ರಂದು ನಾವು ಮಾಡಿಕೊಂಡ ಪಾಲುವಿಭಾಗದ ಬಗ್ಗೆ ವಾದಿಗೆ ಯಾವುದೇ ರೀತಿಯಲ್ಲಿ ಮಾಹಿತಿ ಇರಲಿಲ್ಲ ಮತ್ತು

ವಾದಿಗೆ ಆ ಪಾಲುವಿಭಾಗ ಬಂಧಕವಾಗುವುದಿಲ್ಲ ಎಂದರೆ ಸರಿಯಲ್ಲ. ದಿನಾಂಕ 10.10.2000 ರಂದು ನಾನು ಮತ್ತು 1 ನೇ ಪ್ರತಿವಾದಿ ಮಾಡಿಕೊಂಡ ಪಾಲುವಿಭಾಗ ಕೂಡಾ ವಾದಿಗೆ ಬಂಧಕವಾಗುವುದಿಲ್ಲ ಎಂದರೆ ಸರಿಯಲ್ಲ. ಕಾನೂನು ಬಾಹಿರ ಪಾಲುವಿಭಾಗದ ಪ್ರಕಾರ ನನ್ನ ಮಗ 6 ನೇ ಪ್ರತಿವಾದಿಗೆ ಬರೆದುಕೊಟ್ಟ ದಾನ ಪತ್ರ ಕೂಡಾ ವಾದಿಗೆ ಬಂಧಕವಾಗುವುದಿಲ್ಲ ಎಂದರೆ ಸರಿಯಲ್ಲ. 7 ನೇ ಪ್ರತಿವಾದಿಯ ಗಂಡನಿಗೆ ಬರೆದು ಕೊಟ್ಟಿರುವ ಕ್ರಯ ಪತ್ರ ಕೂಡಾ ವಾದಿಯ ಹಕ್ಕಿಗೆ ಬಂಧಕವಾಗುವುದಿಲ್ಲ ಎಂದರೆ ಸರಿಯಲ್ಲ. ನಾನು, 1 ನೇ ಪ್ರತಿವಾದಿ ಮತ್ತು ಚನ್ನಬಸಮ್ಮ ವಾದಿಯ ಹಿಸ್ಸೆಯನ್ನು ಹೊಡೆದುಕೊಳ್ಳುವ ಉದ್ದೇಶದಿಂದ ಶಾಮೀಲಾಗಿ ಪಾಲುವಿಭಾಗ ಪತ್ರವನ್ನು ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ. 4 ನೇ ಪ್ರತಿವಾದಿಯಿಂದ ನನ್ನ ಹೆಂಡತಿ ಪಡೆದುಕೊಂಡ ಕ್ರಯ ಪತ್ರ ಕೂಡಾ ಕಾನೂನು ಬಾಹಿರ ಎಂದರೆ ಸರಿಯಲ್ಲ.

7. ನಮ್ಮ ತಂದೆ-ತಾಯಿ ಜೀವಂತ ಇರುವವರೆಗೆ ವಾದಿಯು ತವರು ಮನೆಗೆ ಬಂದು-ಹೋಗುತ್ತಿದ್ದಳು ಎಂದರೆ ಸರಿ. ನನ್ನ ತಂದೆ-ತಾಯಿ ಬದುಕಿದ್ದಾಗ ಅವರು ಸಾಲ ಪಡೆದುಕೊಂಡ ಬಗ್ಗೆ ದಾಖಲೆಗಳನ್ನು ಹಾಜರು ಮಾಡಿದ್ದೀರಾ? ಎಂದರೆ ಬ್ಯಾಂಕಿನಲ್ಲಿ ಸಾಲ ಪಡೆದಿದ್ದರು, ದಾಖಲೆ ಹಾಜರು ಮಾಡಿಲ್ಲ. ನನ್ನ ತಂದೆ-ತಾಯಿ ಖಾಸಗಿ ವ್ಯಕ್ತಿಗಳಿಂದ ಎಷ್ಟೆಷ್ಟು ಸಾಲ ಮಾಡಿದ್ದರು ಎಂಬ ಬಗ್ಗೆ ದಾಖಲೆ ಹಾಜರು ಮಾಡಿದ್ದೀರಾ? ಎಂದರೆ ಮಾಡಿಲ್ಲ. ಆದ್ದರಿಂದ, ಪ್ರತಿವಾದ ಪತ್ರದಲ್ಲಿ ನನ್ನ ತಂದೆ-ತಾಯಿ ವಾದಿಯ ಮದುವೆ ಮಾಡಲು ಸಾಕಷ್ಟು ಸಾಲ ಮಾಡಿದ್ದರು ಎಂದು ಸುಳ್ಳು ಬರೆಯಿಸಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂದೆ-ತಾಯಿ ಮೃತಪಟ್ಟ ನಂತರ ವಾದಿಯು ನನ್ನನ್ನು ಮತ್ತು 1 ನೇ ಪ್ರತಿವಾದಿಯನ್ನು ಆಕೆಯ ಹಿಸ್ಸೆ ಕೊಡಿ ಎಂದು ಕೇಳುತ್ತಿದ್ದಳು ಎಂದರೆ ಸರಿಯಲ್ಲ. ಸಾಕಷ್ಟು ಬಾರಿ ಕೇಳಿದರೂ ನಾವು ಕೊಡುವುದಿಲ್ಲ, ಏನು ಬೇಕಾದರೂ ಮಾಡಿಕೋ ಎಂದು ಹೇಳಿದ್ದೆವು ಎಂದರೆ ಸರಿಯಲ್ಲ. 5 ಜನ ಮಕ್ಕಳು ಆಸ್ತಿಗಳನ್ನು ಸಮನಾಗಿ ಹಂಚಿಕೊಳ್ಳಲು ನನಗೆ ತಕರಾರು ಇತ್ತೇ? ಎಂದರೆ ತಕರಾರು ಇರಲಿಲ್ಲ. ನಾನು ಹೇಳುತ್ತೇನೆ, ನನ್ನ ತಾಯಿ ಇದ್ದಾಗ ನನ್ನ ಅಕ್ಕನನ್ನು ಬಡವರ ಮನೆಗೆ ಮದುವೆ ಮಾಡಿ ಕೊಟ್ಟಿದ್ದೇವೆ ಆದ್ದರಿಂದ, ಆಕೆಗೆ ಭಾಗ ಕೊಡಿ ಎಂದು ಹೇಳಿದ್ದರು. ನನ್ನ ತಾಯಿ ಆ ರೀತಿ ಹೇಳಿದ್ದ ಬಗ್ಗೆ ದಾಖಲೆಗಳು ಇರುತ್ತವೆಯೇ? ಎಂದರೆ ಇರುವುದಿಲ್ಲ. ನನ್ನ ತಾಯಿ ಆ ರೀತಿ ಹೇಳಿದ್ದಳೆಂದು ವಾದಿಗೆ ಕೂಡಾ ತಿಳಿಸಿ ವಾದಿಯ ಮುಂದೆ ನಾನು, 1 ನೇ ಪ್ರತಿವಾದಿ ಮತ್ತು ಚನ್ನಬಸಮ್ಮ ಪಾಲುವಿಭಾಗ ಮಾಡಿಕೊಂಡು ಆ ಪತ್ರಕ್ಕೆ ವಾದಿಯ ಸಹಿ ಪಡೆಯಲಾಗಿತ್ತೇ ? ಎಂದರೆ ಇಲ್ಲ. ದಾವಾ ಸ್ವತ್ತು 21 ಎಕರೆ 64 ಸೆಂಟ್ಸ್ ಆಸ್ತಿಯಲ್ಲಿ ವಾದಿಗೆ ಕೂಡಾ 1/5 ಭಾಗದ ಹಿಸ್ಸೆ ಹಕ್ಕು ಇದ್ದರೂ ಇಲ್ಲವೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ತಂದೆ-ತಾಯಿ ತೀರಿಕೊಂಡ ನಂತರ ಕಂದಾಯ ಇಲಾಖೆಯಿಂದ ವಂಶವೃಕ್ಷ/ಜೀವಂತ ಕುಟುಂಬ ಸದಸ್ಯರ ದೃಢೀಕರಣ ಪತ್ರವನ್ನು ಪಡೆದುಕೊಂಡಿದ್ದುಂಟೇ ? ಎಂದರೆ ಇಲ್ಲ. ನಾನು ಸುಳ್ಳು ತಕರಾರು ಪತ್ರ ಸಲ್ಲಿಸಿ , ಸುಳ್ಳು ಪ್ರಮಾಣ ಪತ್ರದ ಮೂಲಕ ಸುಳ್ಳು ಸಾಕ್ಷಿಯನ್ನು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀಸವಾಲು : 2 ನೇ ಪ್ರತಿವಾದಿ ಪರ ವಕೀಲರು ಪ್ರತಿವಾದ ಪತ್ರ ಸಲ್ಲಿಸಿಲ್ಲವೆಂದು ಹೇಳಿದ್ದು, 7 ನೇ ಪ್ರತಿವಾದಿಯ ಪರ ವಕೀಲರು ಪಾಟೀಸವಾಲು ಇರುವುದಿಲ್ಲವೆಂದು ಹೇಳಿದ್ದಾರೆ.**

**ಮರುವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಗಿದೆ)

ಓ.ಹೇ.ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ
ಜೆ.ಎಂ.ಎಫ್.ಸಿ. ಹಗರಿಬೊಮ್ಮನಹಳ್ಳಿ